ಪಯಣದ ಮೊದಲ ಹೆಜ್ಜೆ. ಇದು ಅಧ್ಯಯನಶೀಲತೆ ಶುರುವಾಗಬೇಕಾದ ಪ್ರಮುಖ ಬಿಂದುವೂ ಹೌದು. ನೀವು ಎಲ್ಲಿ ಡಿಮ್ಯಾಟ್ ಖಾತೆ ತೆರೆಯಬೇಕು ಎನ್ನುವುದು ಈ ಕೆಳಕಂಡ ಪ್ರಶ್ನೆಗಳಿಗೆ ಸಿಗುವ ಉತ್ತರಗಳನ್ನು ಆಧರಿಸಿರಬೇಕು' ಎನ್ನುತ್ತಾರೆ ಬೆಂಗಳೂರು ಕದಿರೇನಹಳ್ಳಿಯ 'ಆರ್‌ಎಸ್‌ಪಿ ಫೈನಾನ್ಶಿಯಲ್ ಸರ್ವೀಸಸ್'ನ ರಾಘವೇಂದ್ರ ಭಟ್. ಆ ಪ್ರಶ್ನೆಗಳೆಂದರೆ:

- ನಿಮ್ಮ ಈವರೆಗಿನ ಷೇರುಪೇಟೆಯ ಜ್ಞಾನ ಎಷ್ಟಿದೆ?
- ಕಂಪ್ಯೂಟರ್ ಮತ್ತು ಮೊಬೈಲ್ ಆಪ್‌ಗಳನ್ನು ಸುಗಮವಾಗಿ ಬಳಸುವ ಸಾಮರ್ಥ್ಯವಿದೆಯೇ?
- ಮುಖಾಮುಖಿ ಮಾತನಾಡುವುದು, ಜನರನ್ನು ಭೇಟಿಯಾಗಿ ವ್ಯವಹಾರ ಮಾಡುವುದು ನಿಮಗೆ ಇಷ್ಟವೇ?
- ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸೆಕೆಂಡ್ ಒಪಿನಿಯನ್ ಕೇಳುವುದು ನಿಮಗೆ ರೂಢಿಯೇ?
- ಇದನ್ನೊಂದು ಕೆಲಸ ಎಂದುಕೊಂಡು, ಇದರಲ್ಲೇ ಬದುಕು ಕಟ್ಟಿಕೊಳ್ಳಬೇಕೆಂಬ ಉದ್ದೇಶದಿಂದ ಷೇರುಪೇಟೆಗೆ ಬರುತ್ತಿದ್ದೀರಾ?
- ಸಂಪತ್ತು ವೃದ್ಧಿಗೆ ಷೇರುಪೇಟೆ ಅತ್ಯುತ್ತಮ ಸಾಧನ. ನನಗೆ ದೀರ್ಘಕಾಲೀನ ಹೂಡಿಕೆ ಇಷ್ಟ ಎಂದು ಷೇರುಪೇಟೆಗೆ ಬರುತ್ತಿದ್ದೀರಾ?

ಕಂಪ್ಯೂಟರ್, ಮೊಬೈಲ್ ಜ್ಞಾನ, ಷೇರುಪೇಟೆ ವಿದ್ಯಮಾನಗಳ ಅರಿವು ಚೆನ್ನಾಗಿದ್ದು 'ಡೇ ಟ್ರೇಡಿಂಗ್' ನಡೆಸುವುದೇ ಗುರಿಯಾಗಿದ್ದರೆ ಡಿಸ್ಕೌಂಟ್ ಬ್ರೋಕರ್‌ಗಳು ನಿಮಗೆ ಸೂಕ್ತ. ಅಲ್ಲಿ ಬ್ರೋಕರೇಜ್ ಕಮಿಷನ್ ಕಡಿಮೆಯಿರುತ್ತೆ. ಲೆವರೇಜ್‌ನ ಅನುಪಾತವೂ ಹೆಚ್ಚು. ಲೆವರೇಜ್ ಎಂದರೆ ಒಂದು ನಿರ್ದಿಷ್ಟ ಮೊತ್ತಕ್ಕೆ ಅನುಪಾತವಾಗಿ ವಹಿವಾಟು ನಡೆಸಲು ಬ್ರೋಕರೇಜ್ ಸಂಸ್ಥೆಗಳು ನೀಡುವ ಅವಕಾಶ. 1 ಲಕ್ಷ ರೂಪಾಯಿ ಕೈಲಿದ್ದರೆ 10 ಲಕ್ಷದ ವಹಿವಾಟು ನಡೆಸಲು ಅವಕಾಶ ಕೊಡುವ ಬ್ರೋಕರೇಜ್‌ಗಳೂ ಇವೆ. ಈಗ 'ಜಿರೋಧಾ' ಮತ್ತು '5 ಪೈಸೆ' ಹೆಚ್ಚು ಜನಪ್ರಿಯವಾಗಿರುವ ಡಿಸ್ಕೌಂಟ್ ಬ್ರೋಕರೇಜ್ ಕಂಪನಿಗಳು. ಸಾಂಪ್ರದಾಯಿಕ ರೀತಿಯಲ್ಲಿ ವಹಿವಾಟು ನಡೆಸುತ್ತಿದ್ದ ಏಜೆಂಲ್ ಬ್ರೋಕಿಂಗ್‌ನಂಥ ಹಲವು ಕಂಪನಿಗಳು ಈಗ ಡಿಸ್ಕೌಂಟ್ ಬ್ರೋಕರೇಜ್ ಸೇವೆಯನ್ನೂ ಒದಗಿಸುತ್ತಿವೆ.

ದೀರ್ಘಕಾಲದ ಹೂಡಿಕೆ ನಿಮ್ಮ ಉದ್ದೇಶವಾಗಿದ್ದು, ಷೇರುಪೇಟೆಯನ್ನು ಸಂಪತ್ತು ವೃದ್ಧಿಯ ಸಾಧನ ಎಂದು ಭಾವಿಸುವುದಾದರೆ ಕಾಲದ ಪರೀಕ್ಷೆಯಲ್ಲಿ ತೇರ್ಗಡೆಯಾದ, ನಂಬಿಕಸ್ಥ ಕಂಪನಿಗಳಲ್ಲಿ ಡಿಮ್ಯಾಟ್ ಖಾತೆ ತೆರೆಯುವುದು ಒಳಿತು. ಇಂಥ ಕಡೆ ಸಾಮಾನ್ಯವಾಗಿ ಚೆನ್ನಾಗಿ ತಿಳಿದುಕೊಂಡ ರಿಲೇಶನ್‌ಶಿಪ್ ಮ್ಯಾನೇಜರ್‌ಗಳು ಇರುತ್ತಾರೆ. ನೀವು ಫೋನ್ ಮಾಡಿದರೆ ಮುಕ್ತವಾಗಿ ಮಾತನಾಡುತ್ತಾರೆ, ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ, ಸೂಕ್ತ ಸಲಹೆಗಳನ್ನೂ ಕೊಡುತ್ತಾರೆ, ಕಸ್ಟಮರ್ ಕೇರ್ ಸಪೋರ್ಟ್ ಸಹ ಚೆನ್ನಾಗಿರುತ್ತದೆ. ಇಂಥ ಕಂಪನಿಗಳು ಕೊಡುವ ರೀಸರ್ಚ್ ರಿಪೋರ್ಟ್‌ಗಳು ಹೊಸಬರನ್ನು

## ಪ್ರಜಾಸತ್ತಾತ್ಮಕ ಆರ್ಥಿಕತೆ

ನಮ್ಮ ದೇಶದ ಚಿಲ್ಲರೆ ಹೂಡಿಕೆದಾರರು ಮತ್ತೆ ಷೇರುಪೇಟೆಗೆ ದೊಡ್ಡ ಪ್ರಮಾಣದಲ್ಲಿ ಬಂದಿದ್ದಾರೆ. ಇದು ಸ್ವಾಗತಾರ್ಹ, ಪ್ರಜಾಸತ್ತಾತ್ಮಕ ಬೆಳವಣಿಗೆ. ಹಣವನ್ನು ಉಳಿಸುವುದು ಮತ್ತು ಅದನ್ನು ಸಂಪತ್ತಾಗಿ ಬೆಳೆಸುವುದು ಪ್ರಜೆಗಳಿಗೆ ಮತ್ತು ದೇಶಕ್ಕೆ ಏಕಕಾಲಕ್ಕೆ ಒಳಿತು ಮಾಡುವ ವಿದ್ಯಮಾನ. ಆದರೂ ನನಗೆ ಇಲ್ಲೊಂದು ಸಮಸ್ಯೆ ಕಾಣಿಸುತ್ತಿದೆ. ಬಹುತೇಕ ಚಿಲ್ಲರೆ ಹೂಡಿಕೆದಾರರು ಕಡಿಮೆ ಅವಧಿಯಲ್ಲಿ ಲಾಭ ಬೇಕು ಎಂದು ಯೋಚಿಸುತ್ತಿದ್ದಾರೆ. ಷೇರುಮಾರುಕಟ್ಟೆಯು ದೀರ್ಘಾವಧಿ ಹೂಡಿಕೆಗೆ ಮಾತ್ರ ಪೂರಕವಾದ ಸಾಧನ.

**-ಡಾ. ವಿ.ಕೆ. ವಿಜಯ್‌ಕುಮಾರ್**

**ಹೂಡಿಕೆ ತಜ್ಞ, ಜಿಯೊಜಿತ್ ಎಎಂಸಿ**

**ಚಿನ್ನದ ಮೇಲಿನ ಹೂಡಿಕೆ ಪೋರ್ಟ್‌ಫೋಲಿಯೋಗೆ ಸ್ಥಿರತೆ ತಂದುಕೊಡುತ್ತದೆ.**

SHARE MARKET



## ಪೇಟೆ ಸೂತ್ರಗಳು

- ಹೂಡಿಕೆ ಮಾಡಿದ ಹಣದ ಸುರಕ್ಷತೆ ಕಡೆಗೆ ಗಮನವಿರಲಿ. ಸ್ಟಾಪ್ ಲಾಸ್ ಎಂದಿಗೂ ಮರೆಯಬೇಡಿ.
- ಉದ್ದೇಶ ದೀರ್ಘಾವಧಿ ಹೂಡಿಕೆಯಾಗಿದ್ದರೂ, ನಿರೀಕ್ಷಿತ ಮಟ್ಟದ ಲಾಭ ಬಂದಾಗ (ಟಾರ್ಗೆಟ್ ಪ್ರೈಸ್) ಷೇರು ಮಾರಿ ಲಾಭ ಮಾಡಿಕೊಳ್ಳಿ.
- ಲಾಭ ಗಳಿಕೆ ತಡವಾಗುವುದಿದ್ದರೂ, ಸುಭದ್ರ ಕಂಪನಿಗಳಿಗೆ ಆದ್ಯತೆ ಕೊಡಿ.
- ಹೂಡಿಕೆ ನಿರ್ಧಾರದ ಸಂದರ್ಭ ಕಂಪನಿಗಳ ಸಾಮರ್ಥ್ಯಕ್ಕೆ ಹೆಚ್ಚು ಗಮನವಿರಲಿ.
- ಹೂಡಿಕೆ ಮಾಡಿದ ಕಂಪನಿಗಳ ಮೇಲೆ ಭಾವುಕ ಬಂಧ ಅನಗತ್ಯ.
- ಷೇರುಪೇಟೆಗೆ ಎಲ್ಲ ನಿರೀಕ್ಷೆ, ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡುವ ಸಾಮರ್ಥ್ಯವಿದೆ. ನೀವು ಅಂದುಕೊಂಡಿದ್ದೇ ಯಾವಾಗಲೂ ನಡೆಯುವುದಿಲ್ಲ. ಸಂಭಾವ್ಯ ನಷ್ಟಕ್ಕೂ ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸಿದ್ಧರಾಗಿರಿ.
- ಕಂಪನಿ ಎಷ್ಟೇ ಚೆನ್ನಾಗಿದ್ದರೂ ನೀವು ಅದನ್ನು ಎಷ್ಟು ದುಡ್ಡು ಕೊಟ್ಟು ಖರೀದಿಸಿದಿರಿ ಎನ್ನುವುದೇ ನಿಮ್ಮ ಲಾಭದ ಪ್ರಮಾಣ ನಿರ್ಧರಿಸುತ್ತದೆ. ಸರಿಯಾದ ಮೌಲ್ಯಕ್ಕೆ ಸಿಗದಿದ್ದರೆ ಖರೀದಿ ಮಾಡದೇ ಇರುವುದೇ ಒಳ್ಳೆಯದು.